**1ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ನಂಜನಗೂಡು**

**<u>ಸಿ.ಸಿ.ಸಂಖ್ಯೆಃ 1206 ಃ 2015</u>**

**ಪಿರ್ಯಾದಿ ಃ ಕವಲಂದೆ ಪೊಲೀಸರು**

**ವಿರುದ್ಧ**

**ಆರೋಪಿಗಳು ಃ**

1. **ಕೂಸಮ್ಮ ಕೊಂ ಸಿದ್ದರಾಜು 39 ವರ್ಷ**
2. **ಸುರೇಶ ಬಿನ್ ಲೇಟ್ ಬಂಕರೆ ಮಾದಯ್ಯ 41 ವರ್ಷ**
3. **ಸಿದ್ದರಾಜು ಬಿನ್ ಲೇಟ್ ಬಂಕರೆ ಮಾದಯ್ಯ 32 ವರ್ಷ**
4. **ಮಂಜುನಾಥ ಬಿನ್ ಲೇಟ್ ಗುರುಸಿದ್ದಯ್ಯ 35 ವರ್ಷ**
5. **ಮಹದೇವಸ್ವಾಮಿ ಬಿನ್ ಲೇಟ್ ಗುರುಸಿದ್ದಯ್ಯ 28 ವರ್ಷ**

**ಎಲ್ಲರೂ ವಾಸಃ ಚುಂಚನಹಳ್ಳಿ ಗ್ರಾಮ , ನಂಜನಗೂಡು ತಾಲೂಕು**

**<u>ದೋಷಾರೋಪಣೆ</u>**

**ಸಂದೀಪ್ ಎ. ನಾಯಿಕ್, 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರಾದ ನಾವು ಆರೋಪಿತರಾದ ನಿಮ್ಮ ಮೇಲೆ ದೋಷಾರೋಪಿಸುವುದೇನೆಂದರೆಃ-**

**ದಿಃ 6.5.2015 ರಂದು ರಾತ್ರಿ 8.00 ಗಂಟೆ ಸಮಯದಲ್ಲಿ ಕವಲಂದೆ ಪೋಲಿಸ್ ಠಾಣಾ ವ್ಯಾಪ್ತಿಗೆ ಸೇರಿದ ಸಾಕ್ಷಿ 1ರವರ ಮನೆ ಮುಂದೆ 1 ರಿಂದ 4ನೇ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ ಜಗಳ ತೆಗೆದು ಸಾಕ್ಷಿ 1 ರವರನ್ನು ಅವಾಚ್ಯ ಶಬ್ದಗಳಿಂದ ಬೈದು ಅವಮಾನವನ್ನುಂಟು ಮಾಡಿದ ಕಾರಣ ಭಾರತ ದಂಡ ಸಂಹಿತೆಯ ಕಲಂ 504 ಸಹವಾಚಕ 34 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ ಇದೆ.**

**ಎರಡನೆಯದಾಗಿ ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ , 1ನೇ ಆರೋಪಿ ಸಾಕ್ಷಿ 1ರವರನ್ನು ಹಿಡಿದುಕೊಂಡು ಅಕ್ರಮ ತಡೆಯುಂಟು ಮಾಡಿದ ಕಾರಣ ಭಾರತ ದಂಡ ಸಂಹಿತೆಯ ಕಲಂ 341 ಸಹವಾಚಕ 34 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ ಇದೆ.**

**ಮೂರನೆಯದಾಗಿ ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ , 2ನೇ ಆರೋಪಿ ರೀಪರ್ ಪಟ್ಟಿಯಿಂದ ಸಾಕ್ಷಿ 1ರವರ ತಲೆಯ ಎಡಭಾಗಕ್ಕೆ ಹೊಡೆದು , 5ನೇ**

ಆರೋಪಿ ಕಲ್ಲಿನಿಂದ ಸಾಕ್ಷಿ 2ರವರ ಎಡ ಮತ್ತು ಬಲ ಭುಜಕ್ಕೆ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿದ ಕಾರಣ ಭಾರತ ದಂಡ ಸಂಹಿತೆಯ ಕಲಂ 324 ಸಹವಾಚಕ 34ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ ಇದೆ.

ನಾಲ್ಕನೆಯದಾಗಿ ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ , 1, 3 ಮತ್ತು 4ನೇ ಆರೋಪಿಗಳು ಕೈಯಿಂದ ಸಾಕ್ಷಿ 1ರವರ ಮೈಕೈಗೆ ಹೊಡೆದು, 1 ರಿಂದ 4ನೇ ಆರೋಪಿಗಳು ಕೈಗಳಿಂದ ಸಾಕ್ಷಿ 2ರವರ ಮೈಕೈಗೆ ಹೊಡೆದು ಸಾಮಾನ್ಯ ಸ್ವರೂಪದ ನೋವುಂಟು ಮಾಡಿದ ಕಾರಣ ಭಾರತ ದಂಡ ಸಂಹಿತೆಯ ಕಲಂ 323 ಸಹವಾಚಕ 34 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ ಇದೆ.

ಐದನೆಯದಾಗಿ ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ , 5ನೇ ಆರೋಪಿ ಸದರಿ ಕೃತ್ಯಕ್ಕೆ ಕುಮ್ಮಕ್ಕು ನೀಡಿದ ಕಾರಣ ಭಾರತ ದಂಡ ಸಂಹಿತೆಯ ಕಲಂ 114 ಸಹವಾಚಕ 34 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ ಇದೆ.

ಮೇಲ್ಕಂಡ ಆಪಾದನೆಗೆ ಆರೋಪಿಗಳಾದ ನಿಮ್ಮನ್ನು ನ್ಯಾಯಾಲಯದ ಅಧಿವಿಚಾರಣೆಯನ್ನು ಎದುರಿಸಬೇಕೆಂದು ಆದೇಶಿಸುತ್ತೇನೆ.

ಸಹಿ/-

ದಿನಾಂಕಃ 20.2.2017 — 1ನೇ ಹೆಚ್ಚುವರಿ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ.

ಸ್ಥಳ ಃ ನಂಜನಗೂಡು — ನಂಜನಗೂಡು